Reg no KR ... 12 - For Influential Publicity - 27-9-76

ಷಷ್ಟ್ಯಬ್ದ ಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸಂಸ್ಥಾಪಕರು : ಅರಮನೆ ಸರಸ್ತೇದಾರ್—ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 5 ಪೈಸೆ

ದೇವರಾಜ್ ಅರಸ್ ರಸ್ತೆ ಉದ್ಘಾಟನೆ

ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ್ ಅರಸ್ ರವರ ಹೆಸರಿನಲ್ಲಿ ನಾಮಾಂಕಿತವಾಗಿರುವ ದೇವರಾಜ್ ಅರಸ್ ರಸ್ತೆ ಉದ್ಘಾಟನಾ ಸಮಾರಂಭವನ್ನು ಅಕ್ಟೋಬರು 1 ನೇ ತಾರೀಖು ಬೆಳಿಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ರಾಜ್ಯಪಾಲರವರಾದ ಶ್ರೀ ಉಮಾಶಂಕರ್ ದೀಕ್ಷಿತ್‌ರವರು ನೆರವೇರಿಸುವರು. ಮೈಸೂರು ನಗರಾಭಿವೃದ್ಧಿ ಮಂಡಲ ಅಧ್ಯಕ್ಷರಾದ ಶ್ರೀ ಬಿ ಎನ್ ಕೆಂಗೇಗೌಡರವರು ಅಧ್ಯಕ್ಷತೆ ವಹಿಸುವರು. ಸ್ಥಳ : ಹಳೆ ಸಂತೇಪೇಟೆಯಿಂದ ಆರಂಭವಾಗುವ ಇದೇ ರಸ್ತೆಯ ನಡುವೆ

●

ಕೈಗಾರಿಕೆ ಹಾಗೂ ವ್ಯವಸಾಯಕ್ಕೆ

ನವ ದೆಹಲಿ — ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಅನುಮತಿಸಿರುವ 6 ನೇ ಪಾಂಚವಾರ್ಷಿಕ ಯೋಜನೆಯ ವ್ಯವಸಾಯದಲ್ಲಿ ಶೇಕಡ 4, ಕೈಗಾರಿಕೆಯಲ್ಲಿ ಶೇಕಡ 1 ಸರಾಸರಿ ವಾರ್ಷಿಕ ಬೆಳವಣಿಗೆ ಒದಗಿಸಿದೆ.

★

ನಾರ್ಕೋಟಿಕ್ ಸಂಸ್ಥೆಯಿಂದ ವಶ

ಕೋಟಾ (ರಾಜಸ್ತಾನ) — ದೆಹಲಿಗೆ ಹೋಗುತ್ತಿದ್ದ ಒಂದು ಕಾರಿನಿಂದ ಟಿಲೆರಾ ಹತ್ತಿರ ಕೇಂದ್ರ ನಾರ್ಕೋಟಿಕ್ ಸಂಸ್ಥೆಯು ಒಂದೂವರೆ ಲಕ್ಷ ರೂಪಾಯಿಗಳ ಬೆಲೆಯ 120 ಕೆ ಜಿ ಅಫೀಮು ವಶಪಡಿಸಿಕೊಂಡಿತು.

●

ಆಹಾರ ಪರಿಸ್ಥಿತಿ ಮತ್ತೂ ಉತ್ತಮ

ನವ ದೆಹಲಿ — ಈ ಸಾಲಿನಲ್ಲಿ ಉತ್ತಮಗೊಂಡ ವಿಶ್ವ ಆಹಾರ ಪರಿಸ್ಥಿತಿ ಮತ್ತೂ ಉತ್ತಮವಾಗುವುದೆಂದು ವಿಶ್ವ ಸಂಸ್ಥೆ ಆಹಾರ ಮತ್ತು ವ್ಯವಸಾಯ ಸಮಿತಿಯ ಅಂದಾಜಾಗಿದೆ.

○

ಭಾರತದಲ್ಲಿ ಅಣ್ವಸ್ತ್ರ ಬಾಂಬುಗಳಿಲ್ಲ

ರಯೋಡಿ ಜನಿರೋ — ಭಾರತದಲ್ಲಿ ಅಣ್ವಸ್ತ್ರ ಬಾಂಬುಗಳಿಲ್ಲವೆಂದು, ಕೇವಲ ಶಾಂತಿಯ ಕಾರ್ಯಕ್ಕಾಗಿ ಭೂಗರ್ಭ ವೈಜ್ಞಾನಿಕ ಪ್ರಯೋಗ ನಡೆಸಲಾಗುತ್ತಿದೆಯೆಂದು ಭಾರತ ಅಣು ಆಯೋಗ ಅಧ್ಯಕ್ಷ ಡಾ. ಸೇತ್ನಾ ಗ್ಲೋಬ್ ಪತ್ರಿಕೆಗೆ ತಿಳಿಸಿದರು

○

ಕಡ್ಡಾಯ ಸಂತಾನ ಹರಣ ಚಿಕಿತ್ಸೆ

ತಿರುಪತಿ — ಸಂತಾನ ಹರಣ ಮಾಡುವುದನ್ನು ಕಡ್ಡಾಯ ಮಾಡುವ ಶಾಸನವು ಆಂಧ್ರ ಪ್ರದೇಶ ಶಾಸನ ಸಭೆಯಲ್ಲಿ ತರಲಾಗುವುದೆಂದು ಆರೋಗ್ಯ ಮಂತ್ರಿ ಶ್ರೀ ರಾಜಮಲ್ಲು ಹೇಳಿದರು.

ಮೈಸೂರಿಗೆ ಶ್ರೀ ಶ್ರೀ ಗಣಪತಿ ಸ್ವಾಮೀಜಿಯವರ ಆಗಮನ

ಯಶಸ್ವಿ ಆಗಿ ವಿಶೇಷದ ಪ್ರವಾಸವನ್ನು ಮುಗಿಸಿಕೊಂಡು ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಮೈಸೂರಿಗೆ ನಿನ್ನೆ ಮರಳಿದರು. ರಾಜೇಂದ್ರ ಸರ್ಕಲಿನ ಎಲ್ಲಿನ ಫೌಂಟನ್ ಕ್ಷತ್ರ ಅವರ ಶಿಷ್ಯ ವರ್ಗದವರು ಫಲಪುಷ್ಪ ಹಾರವಿತ್ತು ಸ್ವಾಗತಿಸಿದರು

●

ವಿಶೇಷ ರೈಲುಗಳು

ಮೈಸೂರು — ಅಕ್ಟೋಬರ್ 3ರಂದು ವಿಜಯ ದಶಮಿ ಪ್ರಯುಕ್ತ ಬೆಂಗಳೂರು ನಗರ ಮತ್ತು ಮೈಸೂರು ಮತ್ತು ಮೈಸೂರು–ಮದ್ದೂರು ಸ್ಥಳೀಯ ರೈಲುಗಳ ವಿಸ್ತರಣೆಯು ಮುಂದಿನ ತಿಂಗಳು 2 ರ ಬದಲು 3 ರಂದು ನಡಾಡಲಾಗುವುದು.

★

ಸ್ವರ್ಣಮಹೋತ್ಸವ

ಮೈಸೂರ — ಮೆಡಿಕಲ್ ಕಾಲೇಜ್ ಸ್ವರ್ಣಮಹೋತ್ಸವ ಮುಂದಿನ ತಿಂಗಳು 15 ರಂದು ನಡೆಯುವುದು. ಸಮಾರಂಭ 16-17 ರಂದು ನಡೆಯುವುದು.

○

ತೆಪ್ಪೋತ್ಸವ ಇಲ್ಲ

ಮೈಸೂರು — ನಜರಬಾದಿನಲ್ಲಿಯ ಕಾರಂಜಿಕೆರೆಯಲ್ಲಿ ಅಕ್ಟೋಬರ್ 1 ರಂದು ನಡೆಸಬೇಕೆಂದಿದ್ದ ತೆಪ್ಪೋತ್ಸವ. ಕಾರಂಜಿ ಕೆರೆಯಲ್ಲಿ ಇಂಕಸ್ಸು ನೀರಿಲ್ಲವೆಂದು ಪೋಲಿಸು ಸೂಪರಿಂಟೆಂಡೆಂಟ್‌ರು ವರದಿ ಮಾಡಿರುವದರಿಂದ ತೆಪ್ಪೋತ್ಸವ ನಿಲ್ಲಿಸಲು ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿರುವರು

★

ದಕ್ಷಿಣ ವಲ್ಲಭದ ಆಹಾರ ಸ್ಥಾಪನೆ ಅಕ್ಟೋಬರ್ 1 ರ ವೇಳೆಗೆ ಪ್ರಕಟವಾಗುವ ಸಂಭವ ಇದೆ

ಬ್ರಹ್ಮೋತ್ಸವ ಸಮಾರಂಭ

ತಿರುಪತಿ — ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ಶನಿವಾರ ಪ್ರಾರಂಭವಾದ ಬ್ರಹ್ಮೋತ್ಸವ ಸಮಾರಂಭ ಬರುವ ತಿಂಗಳು 3 ನೇ ತಾರೀಖಿನ ವರೆಗೆ ನಡೆಯುವುದು.

ಭಾರತ ಇಚ್ಚಿಸುವುದಿಲ್ಲ

ನವ ದೆಹಲಿ — ಬಂಗ್ಲಾ ದೇಶದ ಕೇಳಿಕೆಯಾದ ಫರಕ್ಕಾ ಸಮಸ್ಯೆ ಬಗೆಗೆ 3 ನೆಯ ಪಕ್ಷದ ಮಧ್ಯಸ್ಥಿಕೆಗೆ ಭಾರತ ಇಚ್ಚಿಸುವುದಿಲ್ಲವೆಂದು ವಿದೇಶಾಂಗ ಮಂತ್ರಿ ಶ್ರೀ ವೈ ಬಿ ಚವಾಣ್ ಪತ್ರಿಕೆಯವರಿಗೆ ತಿಳಿಸಿದರು.

ಜೋಟಾ ಕ್ರಮ ತಪ್ಪಿಸಲು

ತಿರುಪತಿ — ಜೋಟಾ ಲಡ್ಡು ವ್ಯಾಪಾರ ತಪ್ಪಿಸಲು ತಿರುಮಲ ತಿರುಪತಿ ದೇವಸ್ಥಾನದವರು ಯಾತ್ರಿಕರಿಗೆ ಲಡ್ಡು ಪ್ರಸಾದವನ್ನು ದೇವಾಲಯದ ಮೊಹರುಳ್ಳ ಪಾಲಿಥೀನ್ ಕವರುಗಳಲ್ಲಿ ಸರಬರಾಜು ಮಾಡುವರು.

ಮಳೆಗಾಗಿ ಪ್ರಾರ್ಥನೆ

ಬೆಂಗಳೂರು — ಕರ್ನಾಟಕ ಪ್ರಮುಖ ದೇವಾಲಯಗಳಲ್ಲಿ ವಿಶೇಷ ಪೂಜೆ ಮಳೆಗಾಗಿ ನಡೆಸಲಾಗುವುದು

ಗರ್ಭಪಾತ ಏರಿಕೆ

ಬೊಂಬಾಯಿ — ಮಹಾರಾಷ್ಟ್ರದಲ್ಲಿ ಕಾನೂನುಬದ್ಧ ಗರ್ಭಪಾತ ಹೆಚ್ಚಿವೆ

★

ಲಂಡನ್ — ನಾವು ಸಾರ್ವಜನಿಕ ಚುನಾವಣೆ ತಪ್ಪಿಸಿಕೊಳ್ಳಲು ಇಚ್ಚಿಸುವುದಿಲ್ಲ ನಮ್ಮ ಜನರಿಗೆ ತಿಳಿಸುವ ಮೊದಲು ನಿಮಗೆ ನಾನು ತಿಳಿಸುವುದಿಲ್ಲ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಸ್ವತಂತ್ರ ಟೆಲಿವಿಷನ್ ಸುದ್ದಿಗಾರರಿಗೆ ನವ ದೆಹಲಿಯಲ್ಲಿ ತಿಳಿಸಿದರು.

ಮೈಸೂರಿನಲ್ಲಿ ಅಪಾರ ಸಂಪತ್ತು ಕಳವು

ಕನಾವೆಸ್ಟಲ್ ನಲ್ಲಿ ಫ್ರಿಂಚ್ ಪಾಸಿಗಿ ಮೈಸೂರಿಯಂ : ಹಡಗುಗಳಿಂದ ಸಮುದ್ರದಲ್ಲಿ ಮುಳುಗಿದ್ದ ಶತಮಾನಗಳಲ್ಲಿ ಮುಳುಗಿದ್ದ ಸಂಪತ್ತು ಅಲ್ಲಿಗೆ ಶೇಖರಿಸಲಾಗಿದೆ ; ಇಲ್ಲಿ ಇತ್ತೀಚೆಗೆ 750000 ಡಾಲರುಗಳ ಬೆಲೆಯ ಸ್ಪೇನಿನ ನಾಣ್ಯಗಳೂ ಆಭರಣಗಳೂ ಕಳುವಾಗಿದೆ.

★

ದಿವ್ಯವಾಣಿ

ಸಪ್ಪುರುಷರೊಡನೆ ಕ್ಷಣ ಮಾತ್ರದ ಸಮಾಗಮವಾದರೂ ಅದರಿಂದ ಸಂಸಾರ ಸಾಗರವನ್ನು ಸುಲಭವಾಗಿ ದಾಟಬಹುದು. — ಶ್ರೀ ಶಂಕರಾಚಾರ್ಯರು

○

ಬೆಂಗಳೂರು — ಖಂಡಸಾರಿ ಸಕ್ಕರೆಯ ಮೇಲೆ ಲೆವಿ ಅಜ್ಜೆ ಜಾರಿಮಾಡಬೇಕೆಂದಿರುವ ಯೋಜನೆಯನ್ನು ಇದರ ತಯಾರಕರ ಸಂಘ ವಿರೋಧಿಸಿದೆ.

ಗೋರಕ್ಷಣಾ'ಕ್ಕೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ್ಗೂ " ಗೋರಕ್ಷಣಾ ' ವು ತನ್ನ ಬೆಳ್ಳಿ ಹಬ್ಬ ನೆರವೇರಿಸಿರುವದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, ' ಗೋರಕ್ಷಣಾ " ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

' ಗೋರಕ್ಷಣಾ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನೆ ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಪೂರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಷ್ಟ್ರದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

ಭಾರತದಲಿ ಗೋವಧೆ
ಪೂರ್ಣ ನಿಶೇಧವಾಗಲಿ

Protect the Cow

ವುಡ್‌ಲಾಂಡ್ 24 9 76 ರಿಂದ

ಅವೋಫು ಆರಂಭ

ಡಂಗೀಲಾ ರತ್ನ್

ಹಿಂದಿ

ಕಲರ್

ರಿಷಿಕಪೂರ್ ಸರ್ವಬಾಬಿ ಅಶೋಕಕುಮಾರ್ ಅಜಿತ್ ಅಭಿನಯ

ದಿನ 3 ಪ್ರದರ್ಶನಗಳು

ಅಪೆರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಾಶಂಕರ್ ಅಭಿನಯ

ಕನ್ನಡ

ಪ್ರತಿ ದಿನ 3 ಪ್ರದರ್ಶನಗಳು

SHAKTI
SUDHA

A Superb Tonic

Contribute Liberally to the National Defence Fund

Edited Printed and Published by Dharmaprachara ratna M S. Krishna Rao (Proprietor of the Satyavadi) Press. Chamarajapuram Mysore 4